ಶ್ರೀ ಎಂ. ರಘುಪತಿ.—ಬಹುತೇಕ ಪ್ರಶ್ನೆಗಳಿಗೆ ಉತ್ತರ ದೊರೆಯುತ್ತಿದೆ, ಉತ್ತರ ದೊರೆಯದಿದ್ದ ಪ್ರಶ್ನೆಗಳಿಗೆ ಉತ್ತರವನ್ನು ತರಿಸಿಕೊಡಲಾಗುತ್ತಿದೆ.

ಶ್ರೀ ಯು. ಭೂಪತಿ.—ನಿಯಮ ೩೩ರ ಪ್ರಕಾರ ಕೇಳಿದಂತಹ ವಿಷಯಗಳಿಗೆ ನಾಳೆ ಉತ್ತರ ಹೇಳುತ್ತೇವೆಂದು ಹೇಳುತ್ತಾರೆ, ಇವತ್ತಿನವರೆಗೂ ನನ್ನ ಎರಡು-ಮೂರು ಪ್ರಶ್ನೆಗಳಿಗ ಉತ್ತರ ಬಂದಿಲ್ಲ. ಮಾನ್ಯ ಶಿಕ್ಷಣ ಸಚಿವರೂ ಕೂಡ ಉತ್ತರ ಕೊಟ್ಟಿಲ್ಲ.

(XX) ಹೊಸನಗರ ತಾಲ್ಲೂಕು ಚಕ್ರಾ ಯೋಜನೆಯಡಿಯಲ್ಲಿ ಭೂಮಿ ಕಳೆದಂ ಕೊಂಡವರಿಗೆ ಪರಿಹಾರ ಕೊಡುವ ಬಗ್ಗೆ.

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿಂ ಚಕ್ರಾ ಡ್ಯಾಮ್ ಕೆಲಸ ಪೂರ್ತಿಯಾಗಿದ್ದು ಹರಿದು ಹೋಗತಕ್ಕ ನೀರನ್ನು ಬಂದ್ ಮಾಡಿದ್ದಾರೆ. ಕೆರೆ ತುಂಬುತ್ತಿದೆ, ರೈತರಿಗೆ ಪುನರ್ವಸತಿ ಮಾಡಿಲ್ಲ. ೨೫-೩೦ ಕುಟುಂಬಗಳು ಕಣ್ಣೀರು ಇಡುತ್ತಿದ್ದಾರೆ, ಅವರಿಗೆ ಕೊಡಬೇಕಾದ ಪರಿಹಾರವನ್ನು ತಕ್ಷಣ ಕೊಡಬೇಕಾಗಿ ಕೇಳುತ್ತಿದ್ದೇನೆ. ಅವರಿಗೆ ಕೊಡತಕ್ಕ ಪರಿಹಾರವನ್ನು ತಕ್ಷಣ ಕೊಡದಿದ್ದರೆ ಕಳೆದ ವರ್ಷ ವರಾಹಿ ಯೋಜನೆಯಲ್ಲಿ ಸೂಕ್ತ ಪರಿಹಾರ ಕೊಡದಿದ್ದರಿಂದ ಅನೇಕ ದನಕರುಗಳು ತೇಲಿಹೋದವು, ಸರ್ಕಾರ ವಿಳಂಬ ನೀತಿಯನ್ನು ಅನುಸರಿಸುವುದು ಸರಿಯಲ್ಲ. ತಾವು ಸಮಸ್ಯೆಯನ್ನು ತಕ್ಷಣ ಬಗೆಹರಿಸದಿದ್ದರೆ ಚಳುವಳಿ ಮತ್ತು ಹೋರಾಟವನ್ನು ಮಾಡಬೇಕಾದ ಪರಿಸ್ಥಿತಿ ಬರುತ್ತಿದೆ. ತಾವು ತಕ್ಷಣ ಪರಿಹಾರವನ್ನು ಕೊಡದಿದ್ದರೆ ದೊಡ್ಡ ದುರಂತವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿಗಳು).—ಸಭಾಧ್ಯಕ್ಷರೆ, ಆ ಯೋಜನೆಯ ಕೆಳಗಡೆ ಬರತಕ್ಕ ಭೂಮಿಗೆ ಪರಿಹಾರ ಕೊಡುವುದರಲ್ಲಿ ಕೆಲವು ಸಂದರ್ಭಗಳಲ್ಲಿ ತಡವಾಗಿದೆ ನಿಜ. ಈ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆಯನ್ನು ಸದಸ್ಯರಿಗೆ ಕೊಡುತ್ತೇನೆ. ಪರಿಹಾರವನ್ನು ಕೊಡುವಾಗ ಕಾಲಮಿತಿಯನ್ನೂ ಹಾಕಿ ಕೊಡುತ್ತೇವೆ

(XXI) Hardship caused to the Commuters of Kerala & Karnataka.

Sri Blasius M. D. Souza.—Mr. Speaker, Sir, I am bringing to the notice of the Government the hardship caused to the bus passengers going over to Kerala and coming to Karnataka through Talapady in Dakshina Kannada District due to the bus owners of Kerala suddenly stopping the buses a but two months back at Kerala Border instead of plying upto Talapady junction which is 1½ kms inside the Karnataka Border. I would like to know what immediate arrangement the Government proposes to make to help the passengers to travel the 1½ kms gap between Kerala border and Talapady in Karnataka as at present the passengers have to walk and which has caused great hardship to the passengery?

ಶ್ರೀ ಪಿ.ಜಿ. ಆರ್. ಸಿಂಧ್ಯ.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರತಕ್ಕ ವಿಷಯಂದ ಬಗ್ಗೆ ಇವತ್ತೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಮಾತನಾಡುತ್ತೇನೆ. ದಕ್ಷಿಣ ತನ್ನಡ ಜಿಲ್ಲೆಯಂ ಜಿಲ್ಲಾಧಿಕಾರಿಗಳಿಂದಲೂ ಸಮಸ್ಯೆ ಏನೆಂಬುದನ್ನು ತಿಳಿದುಕೊಂಡು ಸಮಸ್ಯೆಯನ್ನು ಬಗೆಹರಿಸಲಾಗುತ್ತದೆ. ಮಾನ್ಯ ಸದಸ್ಯರು ನನ್ನ ಕೊಠಡಿಯಲ್ಲಿ ಕಂಡು ವಿಷಯವನ್ನು ತಿಳಿಸಿದರೆ ಅದನ್ನು ಆದಷ್ಟು ಬೇಗ ಇತ್ಯರ್ಥ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.